(ಶ್ರೀ ಹೆಚ್. ಟಿ. ಕೃಷ್ಣಪ್ಪ)

ಮಾನ್ಯ ಶ್ರೀ ವಿದ್ಯಾಧರ ಅವರ ನಿಧನದ ಬಗ್ಗೆ ಈ ಸಭೆಯಲ್ಲಿ ಚರ್ಚೆ ಮಾಡಲು ಒಂದು ನಿಲುವಳಿ ಸೂಚನೆಯನ್ನು ಮಂಡಿಸಿದಾಗ, ನಮ್ಮ ಭಾವನೆಗಳು ಏನೆಂಬುದನ್ನು ತಮ್ಮ ಮುಂದೆ ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿ ಹಾಗೂ ನಮ್ಮ ಕರ್ತವ್ಯವಾಗಿತ್ತು. ಆದರೆ ತಾವು ಆ ಒಂದು ನಿಲುವಳಿ ಸೂಚನೆಯ ಮೇಲೆ ಏನೂ ಮಾತನಾಡಬೇಡಿ ಎಂದು ಹೇಳಿ ತಮ್ಮ ಒಂದು ಅಸಮ್ಮತಿಯನ್ನು ಸೂಚಿಸಿದಿರಿ. ಅದಕ್ಕಾಗಿ ಅಂದು ಆ ರೀತಿಯಾದ ಘಟನೆ ನಡೆಯಿತೆಂಬುದು ತಮಗೆ ಗೊತ್ತಿದೆ. ನಾವು ತಮ್ಮ ಮನವೊಲಿಸಲು ಎಷ್ಟೇ ಪ್ರಯತ್ನಪಟ್ಟರೂ, ಅದನ್ನು ಬೇರೆ ಒಂದು ರೂಪದಲ್ಲಿ ಈ ಸದನದ ಮುಂದೆ ತಂದು ಅದರ ಬಗ್ಗೆ ಪೂರ್ಣವಾಗಿ ಚರ್ಚೆಮಾಡಬೇಕೆಂಬುದು ವಿರೋಧ ಪಕ್ಷದವರೆಲ್ಲರ ಆಶಯವಾಗಿತ್ತು. ತಮ್ಮನ್ನು ಬೇಟಿ ಮಾಡಿದ ಕಾಲದಲ್ಲಿ ಈಗ ನಿಲುವಳಿ ಸೂಚನೆಯ ಬಗ್ಗೆ ಮಾತನಾಡಬೇಡಿ. ಅದನ್ನು ಮುಂದೆ ನೋಡೋಣ, ಬೇರೆ ಅವಕಾಶವನ್ನು ಮಾಡಿಕೊಡುತ್ತೇನೆಂದು ತಾವು ಹೇಳಿದ್ದೀರಿ ಆ ಒಂದು ಆಶೆಯನ್ನು ನಾನು ಇಟ್ಟುಕೊಂಡಿದ್ದೇನೆ. ಅದರ ಬಗ್ಗೆ ಈಗಾಗಲೇ ಅನೇಕ ಮನವಿಗಳನ್ನು ಕೊಟ್ಟಿದ್ದಾರೆ. ಈ ಸಭೆಯಲ್ಲಿ ಇದು ಸಂಪೂರ್ಣವಾಗಿ ಚರ್ಚೆಯಾಗಬೇಕು. ಈ ಅಧಿವೇಶನ ಮುಗಿಯುವುದರೊಳಗೆ ಇನ್ನು ಯಾವತ್ತಾದರೂ ಒಂದು ದಿವಸ ಇಲ್ಲಿ ಇದು ಚರ್ಚೆ ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು. ಈ ದಿವಸಕ್ಕೆ ಆ ದಿವಸ ನಡೆದ ಘಟನೆಯನ್ನು ಯಾರೂ ಮುಂದುವರಿಸಬಾರದೆಂದು ನಾನು ನನ್ನ ಸ್ನೇಹಿತರಾದಂಥ ವಿರೋಧ ಪಕ್ಷದ ಸ್ನೇಹಿತರನ್ನು ಪ್ರಾರ್ಥನೆ ಮಾಡುತ್ತಿದ್ದೇನೆ. ಈ ಮಧ್ಯೆ, ತಾವು ಮತ್ತೊಮ್ಮೆ ಇದರ ಬಗ್ಗೆ ಸಾಕಾದಷ್ಟು ಮಾಹಿತಿಯನ್ನು ಸಂಗ್ರಹಿಸಿಕೊಂಡು ತಾವೇ ಇದನ್ನು ಚರ್ಚೆಮಾಡಲು ಒಂದು ದಿನಾಂಕವನ್ನು ನಿಗದಿಮಾಡಿ ನಾವು ಇಲ್ಲಿ ಅದನ್ನು ಚರ್ಚೆಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :—ಅದಕ್ಕಾಗಿ ತಮಗೆ ಬಹಳ ವಂದನೆಗಳು. ಈ ವಿಚಾರವನ್ನು ಇವತ್ತು ಮುಂದುವರಿಸಬಾರದೆಂದು ತಮ್ಮ ಸ್ನೇಹಿತರನ್ನು ಕೇಳಿದ್ದಕ್ಕೆ ವಂದನೆಗಳು. ನನಗೆ ಈಗಾಗಲೇ ಇದರ ಬಗ್ಗೆ ಬೇಕಾದಷ್ಟು ನೋಟೀಸುಗಳು ಬಂದಿವೆ.

RESCENDING SUCPENSION ORDER OF SIXTEEN MEMBERS

ಶ್ರೀ ಎಂ ಎಸ್. ಕೃಷ್ಣನ್ : ಮೊನ್ನೆ ನಡೆದಂಥ ಘಟನೆಯ ಬಗ್ಗೆ ಕೆಲವು ಸದಸ್ಯರನ್ನು ಆ ದಿನದ ಮಟ್ಟಿಗೆ ಸಸ್‌ಪೆಂಡ್ ಮಾಡಿದ್ದಾರೆಂದು ತಿಳಿದುಬಂತು. ಅದನ್ನು ತಾವು ರೆಸಿಂಡ್ ಮಾಡುವುದಕ್ಕೆ ಸಾಧ್ಯವಿದೆ. ಅದು ತಮಗೆ ಸ್ವಲ್ಪ ಮಟ್ಟಿಗೆ ಕಷ್ಟವಾಗಬಹುದು, ಆದರೂ ತಾವು ಅದನ್ನು ಕನ್‌ಸೀಡರ್ ಮಾಡಿ

ಬೇಕಾಗಿದೆ. ಇವತ್ತಿನದಿವಸ ಮಾನ್ಯ ವಿರೋಧಪಕ್ಷದ ನಾಯಕರು ಆ ವಿಚಾರವನ್ನು ಇನ್ನೂ ಉಲ್ಬಣ ಸ್ಥಿತಿಯಲ್ಲಿ ತೆಗೆದುಕೊಂಡು ಹೋಗಬಾರದು. ಅದನ್ನು ಬೇರೆ ರೀತಿಯಲ್ಲಿ ಇಲ್ಲಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶವನ್ನು ಕಲ್ಪಿಸಿಕೊಡುತ್ತೀರೆಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ.

ಅಧ್ಯಕ್ಷರು : ನಾನು ಹೇಳದೇ ಇರುವುದನ್ನೆಲ್ಲಾ ನಾನು ಹೇಳಿದೆ ಎಂದು ಹೇಳಬಾರದು. ನನಗೆ ಇಲ್ಲಿ ಕೆಲವು ನೋಟೀಸುಗಳು ಬಂದಿವೆ. ರೂಲ್ 59 ರ ಪ್ರಕಾರ ಅದನ್ನು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದೆ.

ಶ್ರೀ ಎಂ. ಎಸ್ ಕೃಷ್ಣನ್ : ರೂಲ್ 59ರ ಪ್ರಕಾರ ಅದನ್ನು ಅಲ್ಲಿ ಚರ್ಚೆ ಮಾಡಬೇಕೆಂದು ನಾನು ತಮಗೆ ನೋಟಿಸ್ ಕೊಟ್ಟಿದ್ದು.

MR. SPEAKER.—I have said that I will just consider. That is all what I have said.

ಶ್ರೀ ಎಂ. ಎಸ್. ಕೃಷ್ಣನ್ : ರೂಲ್ 59ರ ಪ್ರಕಾರ ಇದನ್ನು ಚರ್ಚೆ ಮಾಡಬೇಕಾಗಿದೆ. You may agree or not agree. That is a different matter. If you agree, what will be the position is another matter. Since the opposition wants to create an atmosphere where there is peace, calmness, so that this House can function in a proper manner, I want to know whether the Chair can reconsider the action already taken.

MADAM SPEAKER.—They have regretted for it. They say it was not their intention to go against the Speaker. Let us leave it at that.

NON-PAYMENT OF SALARIES TO PRIMARY SCHOOL TEACHERS IN THE STATE

ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ).— ಮೈಸೂರು ರಾಜ್ಯದಲ್ಲಿರ ತಕ್ಕ ಪ್ರಾಥಮಿಕ ಉಪಾಧ್ಯಾಯರಲ್ಲಿ ಸುಮಾರು ಒಂದು ಲಕ್ಷ ಉಪಾಧ್ಯಾಯರಿಗೆ ಸುಮಾರು ಮೂರು ನಾಲ್ಕು ತಿಂಗಳುಗಳಿಂದಲೂ ಸಂಬಳವಿಲ್ಲ, ಇದರ ಬಗ್ಗೆ ಕೆಲವರು ಎಲ್ಲಿ ಹೋಗಿ ರಿಪೋರ್ಟ್ ಮಾಡಬೇಕು ಎಂಬುದಾಗಿ ಕೇಳುತ್ತಿದ್ದಾರೆ. ನಾವು ಅಹಿಕೆವಾಗಿ ಅವರನ್ನು ವರ್ಗಾವಣೆ ಮಾಡಿದಮೇಲೆ ಅವರು ಯಾವ